

# ನಕ್ಕುಬಿಡಿ

ಟೀಚರ್: ಮಕ್ಕಳೇ, ಜೀವನದಲ್ಲಿ ಅತಿ ಹೆಚ್ಚು ಒತ್ತಡ ಯಾವಾಗ ಉಂಟಾಗುತ್ತದೆಯೆಂದು ನಿಮ್ಮ ಅನುಭವದ ಹಿನ್ನೆಲೆಯಲ್ಲಿ ಹೇಳಬಲ್ಲಿರಾ?
ಮರಿ ಗುಂಡ: ನಿಮ್ಮ ಬಾಯಿಯೊಳಗೆ ಮೊದಲೇ ಒಂದು ಪಾನಿಪೂರಿ ಇದ್ದು, ನಿಮ್ಮ ಪ್ಲೇಟಿನಲ್ಲಿ ಇನ್ನೊಂದಿರುವಾಗ ಮತ್ತು ಪಾನಿಪೂರಿವಾಲಾ ಮೂರನೆಯದ್ದನ್ನು ತನ್ನ ಕೈಯಲ್ಲಿ ಹಿಡಿದು ನಿಮ್ಮ ಮುಖ ನೋಡುತ್ತಿರುವಾಗ ಟೀಚರ್!

★★★

ದಢೂತಿ ದೇಹದ ಶ್ರೀಮತಿ ಗುಂಡ ತನ್ನ ದೇಹದ ಬೆಳವಣಿಗೆಗೆ ನೀಡುವ ಸ್ಪಷ್ಟೀಕರಣ!
'ನಾವು ಮಹಿಳೆಯರು ಎಷ್ಟೊಂದು ಜ್ಞಾನ ಮತ್ತು ತಿಳುವಳಿಕೆ ಪಡೆದುಕೊಂಡಿರುತ್ತೇವೆಂದರೆ ಮೆದುಳಿನಲ್ಲಿ ಅವನ್ನು ಹಿಡಿದಿಟ್ಟುಕೊಳ್ಳಲು ಜಾಗ ಸಾಕಾಗುವುದಿಲ್ಲ. ಆದ್ದರಿಂದ ಅವು ಪೂರ್ತಿ ಶರೀರದಲ್ಲಿ ಹರಡಿಕೊಳ್ಳುತ್ತವೆ!'

★★★

ಗೋಪಿ ತನ್ನ ಗೆಳೆಯ ಗುಂಡನಲ್ಲಿ, 'ನನ್ನ ಡಿ.ಪಿ. ತುಂಬಾ ಹಳೆಯದಾಗಿದೆ, ಬದಲಾಯಿಸಲೆ' ಎಂದು ಕೇಳಿದ. ಈ ಮಾತನ್ನು ಕೇಳಿಸಿಕೊಂಡ ಗೋಪಿಯ ಹೆಂಡತಿ ಗುಂಡನಲ್ಲಿ ವಿಚಾರಿಸಿದಳು, 'ಈ ಡಿ.ಪಿ. ಎಂದರೇನು?' ಅಂತ. ಅದಕ್ಕುತ್ತರಿಸಿದ ಗುಂಡ, 'ಅಷ್ಟೂ ತಿಳಿದಿಲ್ಲವೆ? ಡಿ.ಪಿ. ಎಂದರೆ ಧರ್ಮಪತ್ನಿ' ಎಂದು ಕೂಡಲೇ ಅಲ್ಲಿಂದ ಕಾಲ್ಕಿತ್ತ. ಅಷ್ಟಕ್ಕೆ, ಪಕ್ಕದಲ್ಲಿದ್ದ ಗೋಪಿಯ ಹಣೆಯಲ್ಲಿ ದೊಡ್ಡ ಗುಳ್ಳೆ ಮೂಡಿತು!



★★★

ವಯೋವೃದ್ಧನೋರ್ವ ಪ್ರತಿದಿನ ಗುಂಡನಿಗೆ ಸಿಪ್ಪೆ ಸುಲಿದ ಗೋಡಂಬಿ, ಬಾದಾಮಿಗಳನ್ನು ತಿನ್ನಲು ನೀಡುತ್ತಿದ್ದರು. ಕುತೂಹಲ ತಾಳಲಾರದೆ ಒಂದು ದಿನ ಗುಂಡ ಅವರಲ್ಲಿ ಕಾರಣ ಕೇಳಿದಾಗ ಅವರೆಂದರು, 'ಮಗಾ, ಹೇಗೂ ನನಗೆ ಹಲ್ಲುಗಳಿಲ್ಲ ಮತ್ತು ಅಷ್ಟು ದುಬಾರಿ ಆಹಾರ ಪದಾರ್ಥಗಳನ್ನು ಕೇವಲ ಚೀಪಿ ಬಿಸಾಕಲು ಮನಸ್ಸು ಒಪ್ಪುವುದಿಲ್ಲ...!'

★★★

ಶ್ರೀಮತಿ ಗುಂಡ ಟಿವಿಯೆದುರಿರುವ ಟೇಬಲ್ ಒರೆಸಲು ಬಂದಾಗ ಟಿವಿ ಸ್ಥಗಿತಗೊಂಡು 'ಬ್ಯಾಡ್ ಸಿಗ್ನಲ್' ಎಂಬ ಫಲಕ ತೋರಿಬಂತು. ಅದನ್ನು ಗಮನಿಸಿದ ಗುಂಡ ಸ್ವಗತದಲ್ಲಿ ಅಂದುಕೊಂಡ, 'ಇವಳೆಂದರೆ ನನಗೆ ಮಾತ್ರ ಅಲ್ಲ, ಈ ಟಿವಿಗೂ ಆಗೋದಿಲ್ಲ'!

★★★

ಗುಂಡ: ಅಮ್ಮಾ, ನಾನು ಇವತ್ತು ಒಂದು ಹುಡುಗೀನ ಆಕ್ಸಿಡೆಂಟಲಿ ಮೀಟ್ ಆದೆ.
ಅಮ್ಮ: ಹೌದೇನೋ, ಏನಂದಳು ಅವಳು?
ಗುಂಡ: ಸುಮ್ಮನೆ ನಕ್ಕಳು.
ಅಮ್ಮ: ಅಷ್ಟೇನಾ, ಯಾಕೋ ಬೇರೇನೂ ಮಾತಾಡಲಿಲ್ವಾ?
ಗುಂಡ: ಇಲ್ಲಮ್ಮ, ನಾನು ಮೊದಲೇ ಹೇಳಿಲ್ಲವೆ, ಆಕ್ಸಿಡೆಂಟಲಿ ಮೀಟ್ ಆದೆ ಎಂದು. ನಾನು ಬೈಕ್ ನಲ್ಲಿ ಹೋಗುವಾಗ ಅವಳ ಸ್ಕೂಟಿ ಜೊತೆ ಆಕ್ಸಿಡೆಂಟ್ ಆಗಿ ಆಕೆ ಬಿದ್ದು ಬಿಟ್ಟಳು. ನಾನವಳನ್ನು ಕೈ ಹಿಡಿದು ಎಬ್ಬಿಸಿದೆ. ಆಗವಳು ನಕ್ಕಳು, ಅಷ್ಟೇ ಕಣಮ್ಮಾ!

★★★

ಹುಡುಗಿ: ದಸರಾ ದಿನ ನಿಮ್ಮ ಮನೆಯಲ್ಲಿ ಏನು ಮಾಡುತ್ತಾರೆ ಕಣೋ?
ಮರಿಗುಂಡ: ನಮ್ಮಪ್ಪ ಆಯುಧಪೂಜೆ ಮಾಡುತ್ತಾರೆ?
ಹುಡುಗಿ: ಯಾವ ಆಯುಧಕ್ಕೆ ಪೂಜೆ ಮಾಡುತ್ತಾರೆ?
ಮರಿಗುಂಡ: ಅಮ್ಮನ ನಾಲಿಗೆಗೆ!

★★★

ತರಗತಿಯಲ್ಲಿ ಟೀಚರ್ ಜಿಪುಣಾಗ್ರೇಸರ ಗುಂಡನ ಮಗ ಮರಿಗುಂಡನನ್ನು ಪ್ರಶ್ನಿಸಿದರು. 'ನಿನ್ನ ಬಳಿ 4000 ರೂಪಾಯಿ ಇದೆ. ಆಗ ನಿನ್ನ ಆಪ್ತ ಗೆಳೆಯ ಮೆಸೇಜ್ ಮಾಡಿ 2000 ರೂಪಾಯಿ ಬೇಕೆಂದು ಕೇಳುತ್ತಾನೆ. ಅದೇ ವೇಳೆ ನಿನ್ನ ಪತ್ನಿ ಮೆಸೇಜ್ ಮಾಡಿ 1000 ರೂಪಾಯಿ ಕೇಳುತ್ತಾಳೆ. ಹಾಗಾದರೆ ನಿನ್ನ ಬಳಿ ಏನು ಉಳಿಯುತ್ತದೆ? ಅದಕ್ಕೆ ಮರಿಗುಂಡ, 'ನನ್ನ ಬಳಿ 4000 ರೂಪಾಯಿ ಮತ್ತು 2 ಓದದ ಮೆಸೇಜುಗಳು' ಎಂದ!

★★★

ಹುಡುಗ: ನಿನಗೆ ಯಾರು ಇಷ್ಟ?
ಹುಡುಗಿ: ಸಲ್ಮಾನ್ ಖಾನ್ ಮತ್ತು ಶಾರುಖ್ ಖಾನ್. ನಿನಗೆ ಯಾರು ಇಷ್ಟ?
ಹುಡುಗ: ನನಗೆ ನಿನ್ನ ಹಾಗೆ ಮಹತ್ವಾಕಾಂಕ್ಷೆಗಳೇನಿಲ್ಲ ಕಣೆ. ತುಂಬಾ ಸಿಂಪಲ್. ನಮ್ಮ ಪಕ್ಕದಮನೆ ಅನಿತಾ ಮಾತ್ರ ಇಷ್ಟ!

★★★

ಹುಡುಗಿ: ಮತ್ಸ್ಯಗಂಧ ಸೂಪರ್ ಫಾಸ್ಟ್ ಎಷ್ಟು ಗಂಟೆಗೆ ಹೋಗುತ್ತದೆ?
ಟಿ.ಟಿ.: ಮಧ್ಯಾಹ್ನ ಒಂದೂವರೆಗೆ.
ಹುಡುಗಿ: ಮುಂಬೈ ಎಕ್ಸ್‌ಪ್ರೆಸ್?
ಟಿ.ಟಿ.: ಮಧ್ಯಾಹ್ನ ಎರಡೂವರೆಗೆ.
ಹುಡುಗಿ: ವೆರ್ನಾ ಮೈಲ್?
ಟಿ.ಟಿ.: ಸಂಜೆ ಏಳು ಗಂಟೆಗೆ.
ಹುಡುಗಿ: ಗೂಡ್ಸ್ ರೈಲು?
ಟಿ.ಟಿ.: ಸಾಯಂಕಾಲ ಐದು ಗಂಟೆಗೆ ಆದರೆ ನಿನಗೆ ಎಲ್ಲಮ್ಮಾ ಹೋಗಲಿಕ್ಕಿದೆ?
ಹುಡುಗಿ: ಎಲ್ಲೂ ಇಲ್ಲ ಸಾರ್, ರೈಲು ಹಳಿಯ ಮೇಲೆ ಮಲಗಿ ಸೆಲ್ಫೀ ತೆಗೆದುಕೊಳ್ಳಬೇಕಿದೆ!

(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ

